ಪಿರಿಯಾಪಟ್ಟಣ ತಾಲ್ಲೂಕಿನಾದ್ಯಂತ ನಡೆಯುತ್ತಿರುವ ಗಣಿಗಾರಿಕೆ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 362(6)

ಸದಸ್ಯರ ಹೆಸರು : ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು : ಶ್ರೀ ವಿ.ಮುನಿಯಪ್ಪ(ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು)

ಪ್ರಶ್ನೆ

ಅ. ಪಿರಿಯಾಪಟ್ಟಣ ತಾಲ್ಲೂಕಿನಾದ್ಯಂತ ನಡೆಯುತ್ತಿರುವ ಗಣಿಗಾರಿಕೆ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ ಇದರಲ್ಲಿ ಅಧಿಕೃತ ಗಣಿಗಾರಿಕೆಗಳೆಷ್ಟು? ಅನಧಿಕೃತ ಗಣಿಗಾರಿಕೆಗಳೆಷ್ಟು?

ಇ. ಅಧಿಕೃತ ಗಣಿಗಾರಿಕೆಯಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು? ಮತ್ತು ಅನಧಿಕೃತ ಗಣಿಗಾರಿಕೆಯಿಂದ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು?

ಈ. ಇಂತಹ ಅನಧಿಕೃತ ಗಣಿಗಾರಿಕೆಯವರ ವಿರುದ್ಧ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? (ಕಳೆದ 3 ವರ್ಷಗಳ ಪೂರ್ಣ ಮಾಹಿತಿ ನೀಡುವುದು)

ಉತ್ತರ

ಅ. ಸರ್ಕಾರದ ಗಮನಕ್ಕೆ ಬಂದಿದೆ.

ಆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಹಾಲಿ 52 ಅಧಿಕೃತ ಕಲ್ಲು ಗಣಿ ಗುತ್ತಿಗೆಗಳು ಚಾಲ್ತಿಯಲ್ಲಿವೆ. ಹಾಗೂ ಅನಧಿಕೃತವಾಗಿ ನಡೆಯುತ್ತಿದ್ದ 5 ಕಲ್ಲು ಗಣಿ ಪ್ರದೇಶವನ್ನು ಪತ್ತೆ ಹಚ್ಚಲಾಗಿದೆ.

ಇ. ಚಾಲ್ತಿಯಲ್ಲಿರುವ ಗಣಿ ಗುತ್ತಿಗೆಯಿಂದ ಸರ್ಕಾರಕ್ಕೆ ವರ್ಷಕ್ಕೆ 40-00 ಲಕ್ಷ ರೂ.ಗಳು ಆದಾಯ ಬರುತ್ತಿದೆ. ಕಳೆದ ವರ್ಷ 5 ಅನಧಿಕೃತ ಗಣಿಗಾರಿಕೆಗಳನ್ನು ಪತ್ತೆ ಹಚ್ಚಲಾಗಿದೆ. ಇದರಿಂದ ರೂ.26,500.00ಗಳನ್ನು ದಂಡದ ರೂಪದಲ್ಲಿ ವಸೂಲು ಮಾಡಲಾಗಿದೆ. ಅನಧಿಕೃತ ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆ.

ಈ. ಕಳೆದ 3 ವರ್ಷಗಳಲ್ಲಿ 21 ಅನಧಿಕೃತ ಗಣಿಗಾರಿಕೆ ನಡೆಯುತ್ತಿರುವುದು ಕಂಡು

ಬಂದಿದೆ. ಇದರಲ್ಲಿ 16 ಪ್ರಕರಣಗಳಲ್ಲಿ ಕಲ್ಲು ಗಣಿ ಗುತ್ತಿಗೆ ಮಂಜೂರು ಮಾಡಲಾಗಿದೆ. ಹಾಗೂ ಅನಧಿಕೃತ ಗಣಿಗಳನ್ನು ಪೋಲೀಸ್ ಹಾಗೂ ಕಂದಾಯ ಇಲಾಖೆ ಇವರ ಸಹಕಾರದೊಂದಿಗೆ ನಿಲ್ಲಿಸಲಾಗಿದೆ. ಹಾಗೂ ಒಟ್ಟು ರೂ.40,900.00 ದಂಡ ವಸೂಲು ಮಾಡಲಾಗಿದೆ.

ನೈಸರ್ಗಿಕ ಸಂಪನ್ಮೂಲ ಬಂದರು ಕೇಂದ್ರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 363(527)

ಸದಸ್ಯರ ಹೆಸರು : ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ(ಧಾರವಾಡ)

ಉತ್ತರಿಸುವ ಸಚಿವರು : ಶ್ರೀ ಬಿ.ರಮಾನಾಥ ರೈ(ಬಂದರು, ಮಿನುಗಾರಿಕೆ ಹಾಗೂ ಪ್ರದೇಶಾಭಿವೃದ್ಧಿ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ನಿಸರ್ಗ ನೀಡಿರುವ ಸಂಪನ್ಮೂಲಗಳಲ್ಲಿ ಪ್ರಮುಖವಾಗಿರುವುದರಲ್ಲಿ ಒಂದಾದ ಕಾರವಾರ ಬಂದರಾಗಲು ರಾಷ್ಟ್ರದಲ್ಲಿಯೇ ಮಹತ್ವದ್ದು ಎಂದು ಸರ್ಕಾರ ಗಮನಿಸಿದೆಯೇ?

ಆ) ಖನಿಜ, ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಮತ್ತು ಸಂಸ್ಕರಣ ಮಾಡಿದ ವಸ್ತುಗಳನ್ನು ರಫ್ತು ಹಾಗೂ ಆಮದು ಮಾಡಿಕೊಳ್ಳಲು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಕಾರವಾರ ಬಂದರು ಮಹತ್ವವಾಗಿರುವುದು ನಿಜವಲ್ಲವೇ?

ಇ) ಕಾರವಾರ ಬಂದರಿನ ಮುಂದಿನ ಅಭಿವೃದ್ಧಿ ಮಾಹಿತಿ ಯೋಜನೆಯನ್ನು ನೀಡುವುದು?

ಉತ್ತರ

ಅ) ಹೌದು.

ಆ) ಹೌದು.

ಇ) ಕಾರವಾರ ಬಂದರನ್ನು 2ನೇ ಹಂತದಲ್ಲಿ ನವ ಮಂಗಳೂರು ಬೃಹತ್ ಬಂದರಿನ ಸಹಯೋಗಿತ್ವದ ನೆರವಿನಡಿಯಲ್ಲಿ ಅಥವಾ ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ